# ಆಹಾ ಸುದ್ದಿ!

★ ಸಸಿತೋಟ



ಜರ್ಮನಿಯಲ್ಲಿ ಈ ಮಾಂಟಿ ಎಂಬ ಹೆಬ್ಬಾವು ತನ್ನ ಮಾಲೀಕನ ಸಲೂನ್‌ನಲ್ಲಿ ಗ್ರಾಹಕರ ಕತ್ತು ಮಸಾಜ್ ಮಾಡುವ ಕೆಲಸ ಗಿಟ್ಟಿಸಿಕೊಂಡಿದೆಯಂತೆ. 4 ಅಡಿ ಉದ್ದದ ಈ ಹೆಬ್ಬಾವು ತನ್ನ ಸ್ನಾಯುಗಳಿಂದ ಮಸಾಜ್ ಮಾಡಿ ನೋವು ಕಡಿಮೆ ಮಾಡುತ್ತದೆ ಎಂದು ಮಾಲೀಕ ಪ್ರಚಾರ ಮಾಡುತ್ತಿದ್ದಾನಂತೆ. ಮಾಲೀಕ ಸಂಬಳ ಕೊಡದಿದ್ದರೂ ಹೊಟ್ಟೆ ತುಂಬಿಸಿಕೊಳ್ಳುವ ಕೆಲಸ ಮಾಂಟಿಗೆ ಸಿಕ್ಕಿದೆ.

ಸ್ಯಾನ್ ಡಿಯಾಗೋದಲ್ಲಿ ಹೊಸ ಬಗೆಯ ಟ್ಯಾಪ್ ಬಿಯರ್ ಪಬ್‌ನಲ್ಲಿ ಲಭ್ಯವಂತೆ. ಇದಕ್ಕೆ ಸ್ಥಳೀಯರು ಇಟ್ಟ ಹೆಸರು 'ಟಾಯ್ಲೆಟ್ ಟು ಟ್ಯಾಪ್'. ಟಾಯ್ಲೆಟ್‌ಗೆ ಬಳಸಿದ ನೀರನ್ನು ಸಂಸ್ಕರಿಸಿ ಮರುಬಳಕೆ ಮಾಡುವ ಸುಸ್ಥಿರ ತಂತ್ರಜ್ಞಾನ ಅಳವಡಿಸಿದ್ದಾರಂತೆ. ಸುಸ್ಥಿರ ತಂತ್ರಜ್ಞಾನವಾದರೂ ಅಸ್ಥಿರ ಹೆಜ್ಜೆ ಇಡುವಷ್ಟು ಕಿಕ್ ಏರುತ್ತದಂತೆ.

ಪಾಕಿಸ್ತಾನದ ಶೇಕ್ ಮೊಹ್ಮದ್ ದಿಬ್ಬಣದಲ್ಲಿ ಆಗಮಿಸಿದ್ದು ಕುದುರೆ ಗಾಡಿಯಲ್ಲೂ ಅಲ್ಲ, ಕುದುರೆ ಮೇಲೂ ಅಲ್ಲ. ಬದಲಾಗಿ ವಾಹನದಲ್ಲಿ ಸಿಂಹವಿರುವ ಪಂಜರದ ಮೇಲೆ ಕುಳಿತುಕೊಂಡು ಬಂದನಂತೆ. ಜೊತೆಗೆ ವಧುವಿನ ಕಡೆಯಿಂದ 5 ಕೋಟಿ ರೂಪಾಯಿ ವರದಕ್ಷಿಣೆ ಪಡೆದು ಪ್ರದರ್ಶನಕ್ಕಿಟ್ಟಿದ್ದನಂತೆ. ಇದೀಗ ಅಲ್ಲಿಯ ಆದಾಯ ತೆರಿಗೆ ಇಲಾಖೆ ನೋಟಿಸ್ ನೀಡಿದೆಯಂತೆ. ಅದೇನೋ ಅಂತಾರಲ್ಲ, ಸುಮ್ಮನಿರಲಾರದೆ ಇರುವೆ ಅಲ್ಲಲ್ಲ, ಸಿಂಹ ಬಿಟ್ಟುಕೊಂಡತಾಯ್ತು.





ರಷ್ಯಾದ ಒಲೆಗ್ ಎಂಬಾತ ಗಗನಚುಂಬಿ ಕಟ್ಟಡದಲ್ಲಿ ಮಾಡಿದ ಈ 'ಮಾರ್ನಿಂಗ್ ವರ್ಕೌಟ್'ನ ಚಿತ್ರ ಮತ್ತು ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ವರ್ಕೌಟ್ ಹೋಗಿ ಒಲೆಗ್ ತಾನೇ ಕಟೌಟ್ ಆಗಿಬಿಟ್ಟರೆ ಎಂಬುದು ಸ್ನೇಹಿತರ ಭಯವಂತೆ.



ಇಥಿಯೋಪಿಯಾದ ಈ ಯುವಕ ಯಿಲ್ಮಾ ಒಂದು ನಿಮಿಷದ ಕಾಲ ಬಾಯಿಯಿಂದ ನೀರನ್ನು ಕಾರಂಜಿಯಂತೆ ಉಗುಳಿ ದಾಖಲೆ ಮಾಡಿದ್ದಾನಂತೆ. ಚುನಾವಣೆ ಪ್ರಚಾರ ಸಂದರ್ಭದಲ್ಲಿ ಗಂಟೆಗಟ್ಟಲೆ ಒಬ್ಬರ ಮೇಲೊಬ್ಬರು ಉಗುಳುವವರು ಇರುವಾಗ ಇದೇನು ಮಹಾ ಅಂದಿರಾ!

ದಕ್ಷಿಣ ಕೊರಿಯಾದಲ್ಲಿ ಅಧ್ಯಕ್ಷೆ ಪಾರ್ಕ್ ಗ್ಯೂನ್ ಪದಚ್ಯುತಿಗೆ ಕೋರ್ಟ್ ಕಳೆದ ವಾರ ಅಂಗೀಕಾರ ನೀಡಿದ್ದಕ್ಕೆ ಅಲ್ಲಿಯ ಜನ ಕೋಳಿಯನ್ನು ತಿಂದು ಸಂತಸಪಟ್ಟರಂತೆ. ಅಧ್ಯಕ್ಷೆಗೆ 'ಚಿಕನ್' ಎಂಬ ಅಡ್ಡ ಹೆಸರು ನೀಡಿದ್ದ ಕೊರಿಯನ್ನರು, ಕೋಳಿಯನ್ನು ಬಲಿದಾನ ಮಾಡಿ ಅದರ ಭಕ್ಷ್ಯ ತಯಾರಿಸಿ ತಿಂದರಂತೆ. ದ.ಕೊರಿಯಾ ಆಗಿದ್ದಕ್ಕೆ ಚಿಕನ್‌ಗಷ್ಟೇ ಸೀಮಿತವಾಯ್ತು, ಉ.ಕೊರಿಯಾ ಆಗಿದ್ದರೆ...!